ಅ) ಉಡುಪಿ ತಾಲ್ಲೂಕು ಅಂಜಾರು ಮತ್ತು ಕುಕ್ಕೆಹಳ್ಳಿ ಗ್ರಾಮದ ಸಂಪರ್ಕದ ಬಜೆಯಲ್ಲಿ ಅಪೂರ್ಣ ಕಾಲು ಸೇತುವೆಯನ್ನು ಪೂರ್ಣಗೊಳಿಸುವಲ್ಲಿ ನಾಗರೀಕರು ಸತತವಾಗಿ ಒತ್ತಾಯಿಸುತ್ತಿರುವುದು ನಿಜವೇ?

ಆ) ಸದರಿ ಕಾಮಗಾರಿಯು ಅಪೂರ್ಣವಾಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆಯ ವಿಷಯದ ಬಗ್ಗೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಯಾವಾಗ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಈಗಿರುವ ಕಾಲು ಸೇತುವೆಯು ಉಡುಪಿ ಪಟ್ಟಣಕ್ಕೆ ನೀರು ಸರಬರಾಜು ಮಾಡುವುದಕ್ಕೆ ಕಟ್ಟಿರುವ ವೆಂಡೆಂಟ್ ಡ್ಯಾಂ ಕಾಲು ಸೇತುವೆ ಹಾದಿಯು ಸಿಬ್ಬಂದಿ ವರ್ಗಕ್ಕೆ ನಿರ್ವಹಣೆಗಾಗಿ ಇದೆ. ಉಡುಪಿ ತಾಲ್ಲೂಕು ಅಂಜಾರು ಮತ್ತು ಕುಕ್ಕೇಹಳ್ಳಿ ಗ್ರಾಮದ ಸಂಪರ್ಕದ ಬಜೆಯಲ್ಲಿ ಕಾಲು ಸೇತುವೆಗಾಗಿ ನಾಗರೀಕರು ಒತ್ತಾಯಿಸುತ್ತಿದ್ದಾರೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಕಾಲು ಸೇತುವೆ ಕಾಮಗಾರಿಯು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ. ಈ ಕಾಮಗಾರಿಗೆ ರೂ. 28.00 ಲಕ್ಷಕ್ಕೆ ರೇಖಾ ಅಂದಾಜು ಪಟ್ಟಿಯು ಬಂದಿದೆ. ವಿವರವಾದ ಅಂದಾಜು ಪಟ್ಟಿ ತರಿಸಿಕೊಂಡು ಪರಿಶೀಲಿಸಿ ಅನುದಾನಕ್ಕೆ ಅನ್ವಯ ಕಾಮಗಾರಿ ತೆಗೆದುಕೊಂಡು ಪೂರ್ಣಗೊಳಿಸಲಾಗುವುದು.

ವಿಷಯ : ರಾಷ್ಟ್ರೀಯ ಹೆದ್ದಾರಿಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 390 (238)

ಶ್ರೀ ಪಿ. ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪಿಸಲಾದ ರಾಷ್ಟ್ರೀಯ ಹೆದ್ದಾರಿಗಳು?

ಆ) ಇವುಗಳ ಪೈಕಿ,ಕೇಂದ್ರದಿಂದ ತೀರುವಳಿಯಾಗಿರುವುದರ ಸಂಖ್ಯೆ;

ಇ) 1993-94ರಲ್ಲಿ ತೆಗೆದುಕೊಳ್ಳಲಾದ ರಾಷ್ಟ್ರೀಯ ಹೆದ್ದಾರಿಗಳ ಹೆಸರು;

ಈ) 1994-95ನೇ ಸಾಲಿನಲ್ಲಿ ಈ ರಾಷ್ಟ್ರೀಯ ಹೆದ್ದಾರಿಗಳಿಗೆ ಮಾಡಲಾಗಿರುವ ಆಯವ್ಯಯ ಹಂಚಿಕೆಗಳ ವಿವರಗಳು;

ಉ) 1994-95ನೇ ಸಾಲಿನಲ್ಲಿ ತೆಗೆದುಕೊಳ್ಳಲು ಪ್ರಸ್ತಾಪಿಸಲಾದ ರಾಷ್ಟ್ರೀಯ ಹೆದ್ದಾರಿಗಳ ಹೆಸರುಗಳು;

ಊ)ಉಳಿದಿರುವ ರಾಷ್ಟ್ರೀಯ ಹೆದ್ದಾರಿಗಳ ತೀರುವಳಿ ಪಡೆಯಲು ಉದ್ದೇಶಿಸಲಾದ ಕ್ರಮಗಳೇನು;

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಪಟ್ಟಿ ಲಗತ್ತಿಸಿದೆ.

ಆ) ಯಾವುವೂ ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಯಾವುವೂ ಇಲ್ಲ.

ಊ) ಉದ್ಭವಿಸುವುದಿಲ್ಲ.

ಪಟ್ಟಿ

ಕ್ರಮ ಸಂಖ್ಯೆ	ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಕೋರಿರುವ ರಾಜ್ಯ ಹೆದ್ದಾರಿಗಳು		ಉದ್ದ (ಕಿ.ಮೀ.)
1.	ಆಂಧ್ರಪ್ರದೇಶದ ಗೂಟಿಯಿಂದ ಗುಂಟಕಲ್-ಬಳ್ಳಾರಿ-ಹೊಸಪೇಟೆ-ಕೊಪ್ಪಳ-ಗದಗ್-ಹುಬ್ಬಳ್ಳಿ-ಕಾರವಾರ (ಇವುಗಳನ್ನು ಸೇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ-17)	:	422
2.	ಬೆಂಗಳೂರು-ಮೈಸೂರು-ನಂಜನಗೂಡು-ಗುಂಡ್ಲುಪೇಟೆ-ಊಟಿ-ಕೊಯಮತ್ತೂರು (ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 47 ತಮಿಳುನಾಡಿನಲ್ಲಿ ಸೇರುವಂತೆ)	:	220
3.	ಮೈಸೂರು-ಶ್ರೀರಂಗಪಟ್ಟಣ-ನಾಗಮಂಗಲ-ಚಿಕ್ಕನಾಯಕನಹಳ್ಳಿ-ಹುಳಿಯಾರ್-ಹಿರಿಯೂರ್-ಬಳ್ಳಾರಿ-ಷಹಪುರ-ಗುಲ್ಬರ್ಗಾ-ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	:	678

4.	ತುಮಕೂರು- ಅರಸಿಕೆರೆ-ಶಿವಮೊಗ್ಗ-ಸಾಗರ-ಹೊನ್ನಾವರ-(ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	:	332
5.	ಬೆಂಗಳೂರು-ಮೈಸೂರು-ಮಡಿಕೇರಿ-ಮಂಗಳೂರು (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	:	385
6.	ಬೆಳಗಾಂ-ಬಿಜಾಪುರ-ಗುಲ್ಬರ್ಗಾ-ಹುಮ್ನಾಬಾದ್ (ರಾಷ್ಟ್ರೀಯ ಹೆದ್ದಾರಿ 9ನ್ನು ಸೇರುವಂತೆ)	:	364
7.	ಬೆಳಗಾಂ - ಬಾಗಲಕೋಟೆ-ರಾಯಚೂರು-ಮೆಹಬೂಬ್‌ನಗರ (ಆಂಧ್ರಪ್ರದೇಶದಲ್ಲಿ)	:	336
8.	ಚಿತ್ರದುರ್ಗ-ಹೊಳಲ್ಕೆರೆ-ಹೊಸದುರ್ಗ-ಚಿಕ್ಕಮಗಳೂರು-ಮೂಡಿಗೆರೆ-ಬೆಳ್ತಂಗಡಿ-ಬಂಟ್ವಾಳ-ಮಂಗಳೂರು (ರಾಷ್ಟ್ರೀಯ ಹೆದ್ದಾರಿ17ರಲ್ಲಿ ಸೇರುವಂತೆ)	:	283
9.	ಧಾರವಾಡ-ಲೋಂಡಾ-ಅನ್‌ಮೋದ್-ಪಣಜಿ (ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಸೇರುವಂತೆ)	:	95
10.	ಮೂಡುಬಿದ್ರಿ-ಕಾರ್ಕಳ-ಶೃಂಗೇರಿ-ತೀರ್ಥಹಳ್ಳಿ-ಷಿಕಾರಿಪುರ ಶಿರಾಳಕ್ಕೊಪ : ಹುಬ್ಬಳ್ಳಿ-ಬಾಗಲಕೋಟೆ-ಹುನಗುಂದ	:	550
11.	ಶಿರಾ-(ಬೆಂಗಳೂರು-ಪೂನಾ ರಾಷ್ಟ್ರೀಯ ಹೆದ್ದಾರಿ 4) ಮಧುಗಿರಿ-ಗೌರಿಬಿದನೂರು-ಚಿಕ್ಕಬಳ್ಳಾಪುರ-ಚಿಂತಾಮಣಿ-ಶ್ರೀನಿವಾಸಪುರ-ಮುಳಬಾಗಲು (ಬೆಂಗಳೂರು-ಮದ್ರಾಸ್ ರಾಷ್ಟ್ರೀಯ ಹೆದ್ದಾರಿ ನಂ. 4)	:	160
12.	ಚಿತ್ರದುರ್ಗ-ಶಿವಮೊಗ್ಗ-ಸಕಲೇಶಪುರ-ಮಡಿಕೇರಿ ಹಾಗೂ ಕೇರಳದಲ್ಲಿರುವ ತಲ್ಲಿಚೇರಿ.	:	325
13.	ಬೆಂಗಳೂರು-ಕನಕಪುರ-ಮಳವಳ್ಳಿ-ನಂಜನಗೂಡು-ಸುಲ್ತಾನಬತ್ತೇರಿ-ಹಾಗೂ ಕೇರಳದಲ್ಲಿರುವ ಕಲ್ಲಿಕೋಟೆ.	:	250
	ಒಟ್ಟು ಉದ್ದ	:	4400 ಕಿ.ಮೀ.